# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟದೆ)


ನಿಗಮದ ನೋಂದಾಯಿತ ಕಛೇರಿ ವಿಳಾಸ.
#ಸಿ.ಎ.29, ವಿಜಯನಗರ, 2ನೇ ಹಂತ,
ಹಿನ್‌ಕಲ್ ಹತ್ತಿರ, ಮೈಸೂರು-570017.
**ನಿಗಮದ ವೆಬ್ ಸೈಟ್ ವಿಳಾಸ:-**
**WWW.cescmysore.org**
**ಇಮೇಲ್ : gmcescmysore@gmail.com**
**CIN U40109KA2004SGC035177**

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ರವರ ಕಛೇರಿ,
ಕಾರ್ಯ ಮತ್ತು ಪಾಲನಾ ನಗರ ಉಪ ವಿಭಾಗ
ಚಾ.ವಿ.ಸ.ನಿ.ನಿ. ಮಳವಳ್ಳಿ – 430571.
**ದೂರವಾಣಿ ಸಂಖ್ಯೆ: 08231-242026**
**ಮೊಬೈಲ್ ಸಂಖ್ಯೆ: +91-9448994856**
**ಇ-ಮೇಲ್: aeemalavalli1@cescmysore.0rg**


ಕ್ರಮಾಂಕ: ಸಕಾನಿಇಂ(ವಿ)/ಸಇಂ(ತಾಂ)/ನಉವಿಮ/2018-19/ 3467-68 ದಿನಾಂಕ: 18 FEB 2019

## -: ಸಭಾ ನಡಾವಳಿಕೆ :-

ದಿನಾಂಕ:- 07-02-2019 ರಂದು ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ), ವೃತ್ತ ಕಛೇರಿ, ಸೆಸ್ಕ್, ಮಂಡ್ಯ ರವರ ಅಧ್ಯಕ್ಷತೆಯಲ್ಲಿ, ಮಳವಳ್ಳಿ ನಗರ ಉಪವಿಭಾಗದ ಆವರಣದಲ್ಲಿ ನಡೆದ ಜನ ಸಂಪರ್ಕ ಸಭೆಯ ಸಭಾ ನಡಾವಳಿ.

**ಹಾಜರಿದ್ದ ಅಧಿಕಾರಿಗಳು/ಸಿಬ್ಬಂದಿ ವರ್ಗದವರು**

1) ಶ್ರೀ. ಶ್ರೀನಿವಾಸ ಮೂರ್ತಿ : ಅಧೀಕ್ಷಕ ಇಂಜಿನಿಯರ್(ವಿ), ವೃತ್ತ ಕಛೇರಿ, ಸೆಸ್ಕ್, ಮಂಡ್ಯ
2) ಶ್ರೀ. ರವಿಶಂಕರ್.ಇ : ಕಾರ್ಯನಿರ್ವಾಹಕ ಇಂಜಿನಿಯರ್(ವಿ),ವಿಭಾಗ ಕಛೇರಿ, ಸೆಸ್ಕ್, ಮದ್ದೂರು.
3) ಶ್ರೀ. ಆರ್.ಪರಮೇಶ್ವರಪ್ಪ, : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)ನಗರ ಉ/ವಿ, ಸೆಸ್ಕ್, ಮಳವಳ್ಳಿ.
4) ಶ್ರೀಮತಿ,ಪಿ.ರಾಜೇಶ್ವರಿ, : ಸಹಾಯಕ ಇಂಜಿನಿಯರ್(ತಾಂ). ನಗರ ಉ/ವಿ. ಸೆಸ್ಕ್, ಮಳವಳ್ಳಿ.
5) ಶ್ರೀ.ಎಸ್.ಆರ್.ಸಚಿನ್ : ಸಹಾಯಕ ಇಂಜಿನಿಯರ್(ವಿ),ಘಟಕ-1, ನಗರ ಉ/ವಿ,ಸೆಸ್ಕ್,ಮಳವಳ್ಳಿ.
6) ಶ್ರೀ ನಾಗೇಂದ್ರ.ಕೆ : ಸಹಾಯಕ ಇಂಜಿನಿಯರ್(ವಿ),ಘಟಕ-2, ನಗರ ಉ/ವಿ,ಸೆಸ್ಕ್,ಮಳವಳ್ಳಿ.
7) ಶ್ರೀ.ಕೆ.ಎಲ್.ಮಧುಸೂಧನ್. : ಕಿರಿಯ ಇಂಜಿನಿಯರ್(ವಿ), ಹಾಡ್ಲಿ ಶಾಖೆ. ಸೆಸ್ಕ್, ನಗರ ಉ/ವಿ.ಮಳವಳ್ಳಿ.
8) ಶ್ರೀ.ಹನುಮಂತಯ್ಯ, : ಪ್ರಭಾರ ಕಿರಿಯ ಇಂಜಿನಿಯರ್(ವಿ), ಕಾಗೇಪುರ ಶಾಖೆ, ಸೆಸ್ಕ್,ನಗರ ಉ/ವಿ.ಮಳವಳ್ಳಿ.
9) ಶ್ರೀ.ರಮೇಶ್, : ಹಿರಿಯ ಸಹಾಯಕರು, ನಗರ ಉ/ವಿ.ಸೆಸ್ಕ್, ಮಳವಳ್ಳಿ.

| ಕ್ರ. ಸಂ. | ದೂರುದಾರರ ಹೆಸರು ಮತ್ತು ವಿಳಾಸ | ಮೊಬೈಲ್ ಸಂಖ್ಯೆ | ದೂರಿನ ವಿಷಯ | ಸಭೆಯಲ್ಲಿ ತೆಗೆದುಕೊಂಡ ನಿರ್ಣಯ | ಸಂಬಂಧಿಸಿದ ಅಧಿಕಾರಿ |
|---|---|---|---|---|---|
| 1 | **B.S.**ದೇವರಾಜು, ಬಾಣಸಮುದ್ರ | 9591932474 | 1). ಪರಿವರ್ತಕ ವಿಫಲವಾಗಿ 15 ದಿನಗಳಾದರೂ ಬದಲಾಯಿಸಲು ವಿಳಂಬವಾಗುತ್ತಿದೆ ಎಂದು ದೂರಿರುತ್ತಾರೆ. 2). ಗಂಗಾ ಕಲ್ಯಾಣ ಯೋಜನೆಯಡಿ ಒಂದೇ ಐಪಿ ಸೆಟ್‌ಗೆ 3 ಪರಿವರ್ತಕಗಳಿರುತ್ತವೆ. ಆ ಪರಿವರ್ತಕಗಳಿಂದ | 1). ವಿಫಲವಾದ ಪರಿವರ್ತಕಗಳನ್ನು ಬದಲಾಯಿಸಲು ಈಗ **DTLMS** ತಂತ್ರಾಂಶ ಲಭ್ಯವಿದ್ದು ಶೀಘ್ರವಾಗಿ ಪರಿವರ್ತಕಗಳನ್ನು ಬದಲಾಯಿಸಲಾಗುತ್ತಿದೆ ಆದ್ದರಿಂದ 15 ದಿನಗಳವರೆಗೆ ಕಾಯುವ ಅವಶ್ಯಕತೆ ಇಲ್ಲವೆಂದು ತಿಳಿಸಲಾಯಿತು. ನಂತರ ಶಾಖಾಧಿಕಾರಿಗಳು 25ಕೆವಿಎ ಪರಿವರ್ತಕಗಳು ಸಮಯದಲ್ಲಿ ಲಭ್ಯವಿಲ್ಲದ್ದರಿಂದ | ಶಾಖಾಧಿಕಾರಿ, ಹಾಡ್ಲಿ ಶಾಖೆ |

| | | | | | |
|---|---|---|---|---|---|
| | | | ಬೇರೆ ಐಪಿ ಸೆಟ್‌ಗಳಿಗೆ ವಿದ್ಯುತ್ ಸರಬರಾಜು ಮಾಡಲು ಸಾರ್ವಜನಿಕರು ಹಣ ಕೇಳುತ್ತಿದ್ದಾರೆ ಆದ್ದರಿಂದ ನಿಗಮದಿಂದ ಹಾಲಿ 25ಕೆವಿಎ ಪರಿವರ್ತಕಕ್ಕೆ ಹೆಚ್ಚುವರಿ ಪರಿವರ್ತಕ ಅಳವಡಿಸಲು ಕೋರಿರುತ್ತಾರೆ.<br>3). ವಿಫಲವಾದ ಪರಿವರ್ತಕ ಬದಲಾಯಿಸುವಾಗ ನಿಗಮದ ವಾಹನದಲ್ಲೆ ಪರಿವರ್ತಕ ಸರಬರಾಜು ಮಾಡಲು ಕೋರಿರುತ್ತಾರೆ.<br>4). ತೊಟದ ಮನೆಗೆ ಐಪಿ ಮಾರ್ಗದಿಂದ ವಿದ್ಯುತ್ ಸರಬರಾಜಾಗುತ್ತಿದ್ದು ಅದಕ್ಕೆ ನಿತಂತರ ಜ್ಯೋತಿ ಮಾರ್ಗದಿಂದ ವಿದ್ಯುತ್ ಸರಬರಾಜು ಮಾಡಲು ಕೋರಿರುತ್ತಾರೆ. | ಜೇಷ್ಠತೆಯ ಮೇರೆಗೆ ವಿತರಿಸಲಾಗಿ ವಿಳಂಬವಾಯಿತೆಂದು ತಿಳಿಸಿದರು.<br>2). ಸಣ್ಣ ನೀರಾವರಿ ಇಲಾಖೆಯಿಂದ ಹಾಲಿ 2- ಐಪಿ ಸೆಟ್‌ಗಳಿಗೆ 2 ಪರಿವರ್ತಕಗಳನ್ನು ಅಳವಡಿಸಿದ್ದು ಐಪಿ ಸೆಟ್‌ಗಳು ವಿಫಲವಾಗಿದ್ದು ಪರಿವರ್ತಕಗಳು ಐಡಲ್ ಆಗಿರುತ್ತವೆ. ಸದರಿ ದೂರುದಾರ ಐಪಿ ಸೆಟ್ ಹಾಲಿ 25ಕೆವಿಎ ಪರಿವರ್ತಕಕ್ಕೆ ಸೇರಿದ್ದು ಇನ್ನುಳಿದ 3 ಐಪಿ ಸೆಟ್‌ಗಳು ಅನಧಿಕೃತವಾಗಿವೆ ಎಂದು ಹಾಗು ಅನಧಿಕೃತ 3 ಐಪಿ ಸೆಟ್‌ಗಳನ್ನು ಬೇರೆ ಪರಿವರ್ತಕಗಳ ಮೇಲೆ ಹಾಕಲು ದೂರುದಾರರು ಕೋರುತ್ತಿದ್ದಾರೆ ಎಂದು ಶಾಖಾಧಿಕಾರಿಗಳು ತಿಳಿಸಿದ್ದರಿಂದ, ಅನಧಿಕೃತ ಐಪಿ ಸೆಟ್‌ಗಳಿಗೆ ವಿದ್ಯುತ್ ಸರಬರಾಜು ಮಾಡಲು ಸಾದ್ಯವಿಲ್ಲವೆಂದು ಹಾಗು ಹಣ ಪಾವತಿಸಿ ಸಕ್ರಮಗೊಳಿಸಿಕೊಂಡ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ದೂರುದಾರರಿಗೆ ತಿಳಿಸಿ ಹೇಳಲಾಯಿತು.<br>3) ಈವರೆಗೆ ನಗರ ಮತ್ತು ಗ್ರಾಮೀಣ ಉಪವಿಭಾಗಗಳಿಗೆ ಕಾರಣಾಂತರದಿಂದ ಒಂದೇ ವಾಹನ ಲಭ್ಯವಿದ್ದು ಕೆಲಸ ನಿರ್ವಹಿಸಲು ಕಷ್ಟಸಾದ್ಯವಾಗುತ್ತಿತ್ತು. ಈಗ ಎರಡೂ ವಾಹನಗಳು ಕಾರ್ಯ ನಿರ್ವಹಿಸುತ್ತಿದ್ದು ನಿಗಮದ ವಾಹನದಲ್ಲೆ ಸರಬರಾಜು ಮಾಡಲಾಗುವುದೆಂದು ತಿಳಿಸಲಾಯಿತು.<br>4) ತೊಟದ ಮನೆಗಳಿಗೆ ನಿರಂತರ ಜ್ಯೋತಿ ಮಾರ್ಗದಿಂದ ವಿದ್ಯುತ್ ಸರಬರಾಜು ಮಾಡಲು ನಿಗಮದ ನಿಯಮಾನುಸಾರ ಆಗದಿರುವುದರಿಂದ ಗ್ರಾಹಕರು ಅಂದಾಜು ಮೊತ್ತದ ಮೇಲೆ 10% ಮೇಲ್ವಿಚಾರಣಾ ಶುಲ್ಕ ಪಾವತಿಸಿ ಕಾಮಗಾರಿಯನ್ನು ತಮ್ಮ ಸ್ವಂತ ಖರ್ಚಿನಲ್ಲಿ ನಿರ್ವಹಿಸಿಕೊಳ್ಳಬೇಕೆಂದು ತಿಳಿಸಲಾಯಿತು. | |

| | | | | | |
|---|---|---|---|---|---|
| 2 | ಚಿಕ್ಕಣ್ಣ, ಹೊಸಪುರ | 8105926912 | ಗ್ರಾಮ ವ್ಯಾಪ್ತಿಯಲ್ಲಿ ದುಸ್ಥಿತಿಯಲ್ಲಿರುವ ಕಂಬಗಳನ್ನು ಬದಲಾಯಿಸಲು ಕೋರಿರುತ್ತಾರೆ. | ಅಂದಾಜು ಪಟ್ಟಿಯನ್ನು ವಿಭಾಗೀಯ ಕಛೇರಿಗೆ ಕಾರ್ಯಾದೇಶಕ್ಕಾಗಿ ಸಲ್ಲಿಸಲಾಗಿದೆ ಎಂದು ಶಾಖಾಧಿಕಾರಿಗಳು ತಿಳಿಸಿದ್ದರಿಂದ ಶೀಘ್ರವಾಗಿ ಕಾಮಗಾರಿಯನ್ನು ಪೂರ್ಣಗೊಳಿಸಲು ಶಾಖಾಧಿಕಾರಿಗಳಿಗೆ ಸೂಚಿಸಲಾಯಿತು. | ಶಾಖಾಧಿಕಾರಿ, ಹಾಡ್ಲಿ ಶಾಖೆ |
| 3 | ಈರಯ್ಯ, ಗುಳಗಟ್ಟ | 9108710211 | ಗ್ರಾಮದ ಐಪಿ 63ಕೆವಿಎ ಪರಿವರ್ತಕವು ವಿಫಲವಾಗಿದ್ದು ಬದಲಾಯಿಸಲು ಕೋರಿರುತ್ತಾರೆ. | ಸದರಿ ಪರಿವರ್ತಕವನ್ನು ಶೀಘ್ರವಾಗಿ ಬದಲಾಯಿಸಲು ಶಾಖಾಧಿಕಾರಿಗಳಿಗೆ ಸೂಚಿಸಲಾಯಿತು. | ಶಾಖಾಧಿಕಾರಿ, ಕಾಗೆಪುರ ಶಾಖೆ |

ಜನ ಸಂಪರ್ಕ ಸಭೆಯ ನಂತರ ಅಧೀಕ್ಷಕ ಇಂಜಿನಿಯರ್(ವಿ) ರವರು ಅಧಿಕಾರಿಗಳ ಸಭೆ ನಡೆಸಲಾಗಿ ರೆವಿನ್ಯೂ ಪರಿಶೀಲನೆ ಮಾಡಿ ನಂತರ **DDUGJY** ಮತ್ತು **IPDS** ಯೋಜನೆಯ ಕಾಮಗಾರಿಗಳ ಬಗ್ಗೆ ಚರ್ಚಿಸಿದರು ಕೊನೆಯದಾಗಿ ಉಗ್ರಾಣದಲ್ಲಿ ಸರಕ್ಷಾ ಸಾಮಗ್ರಿಗಳು ಲಭ್ಯವಿದ್ದು ಎಲ್ಲಾ ಶಾಖಾಧಿಕಾರಿಗಳು ಸಾಮಗ್ರಿಗಳನ್ನು ಪಡೆದು ಪವರ್ ಮ್ಯಾನ್‌ಗಳಿಗೆ ವಿತರಿಸಿ ಹಾಗು ವಿತರಿಸಿರುವುದಕ್ಕೆ ರಿಜಿಸ್ಟರ್‌ನಲ್ಲಿ ಸಹಿ ಪಡೆಯಬೇಕು ಮತ್ತು ಸರಕ್ಷಾ ಕ್ರಮ ವಹಿಸಿ ಕೆಲಸ ನಿರ್ವಹಿಸಲು ಸೂಚಿಸಬೇಕೆಂದು ಎಲ್ಲಾ ಶಾಖಾಧಿಕಾರಿಗಳಿಗೆ ಸೂಚಿಸಿದರು.

18/2/19

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಸೆಸ್ಕ್, ನಗರ ಉಪವಿಭಾಗ, ಮಳವಳ್ಳಿ

ಪ್ರತಿಗಳನ್ನು :-

1) ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), ನಿಗಮ ಕಛೇರಿ, ಸೆಸ್ಕ್, ಮೈಸೂರು ರವರ ದಿವ್ಯ ಅವಗಾಹನಗಾಗಿ.
2) ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ.) ನಿಗಮ ಕಛೇರಿ, ಸೆಸ್ಕ್, ಮೈಸೂರು ರವರ ದಿವ್ಯ ಅವಗಾಹನಗಾಗಿ
3) ಮುಖ್ಯ ಇಂಜಿನಿಯರ್(ವಿ), ಸೆಸ್ಕ್, ವಲಯ ಕಛೇರಿ, ಮೈಸೂರು ರವರ ಅವಗಾಹನೆಗಾಗಿ.
4) ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ಮಂಡ್ಯ ವೃತ್ತ, ರವರ ಅವಗಾಹನೆಗಾಗಿ.
5) ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್, ಮದ್ದೂರು ವಿಭಾಗ, ರವರ ಅವಗಾಹನೆಗಾಗಿ.
6) ಶಾಖಾಧಿಕಾರಿ, ಹಾಡ್ಲಿ ಮತ್ತು ಕಾಗೇಪುರ ರವರ ಮಾಹಿತಿಗಾಗಿ,
ಸಲ್ಲಿಸುತ್ತ ತಮ್ಮ ಶಾಖಾ ವ್ಯಾಪ್ತಿಯ ಕುಂದು ಕೊರತೆಗಳ ಬಗ್ಗೆ ಸಭೆಯಲ್ಲಿ ನಿಗದಿ ಮಾಡಿರುವ ದಿನಾಂಕದೊಳಗೆ ಬಗೆ ಹರಿಸಲು ಸೂಚಿಸಲಾಗಿದೆ.
8) ಕಡತ.